# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಸಿ.ಎ.ಇ.ಓ. ಹುದ್ದೆಗಳನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ. ಇಡಿ 109 ಡಿಪಿಐ 2007, ದಿ :01-08-07.

**ಪ್ರಸ್ತಾವನೆ:-**

ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರತೀ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸರಾಸರಿ 250 ರಿಂದ 300 ಶಾಲೆಗಳು ಮತ್ತು 600 ರಿಂದ 800 ಶಿಕ್ಷಕರ ವೇತನ ಮತ್ತು ಇತರ ಆಡಳಿತಾತ್ಮಕ ಕಾರ್ಯಗಳಿಗೆ ಇವರ ಸಮಯ ವ್ಯಯವಾಗುತ್ತಿದ್ದು, ಇತರೆ ಗುಣಾತ್ಮಕ ವಿಷಯಗಳತ್ತ ಗಮನಹರಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಹಾಗೂ ಇವರಿಗೆ ಹೆಚ್ಚಿನ ಕಾರ್ಯದ ಒತ್ತಡ ಇದ್ದುದರಿಂದ, ಪ್ರತೀ 20-25 ಶಾಲೆಗಳಿಗೆ ಒಂದು ಸಮೂಹ ಎಂದು ರಚಿಸಿ, ಪ್ರತಿಯೊಂದು ಸಮೂಹದ ಅಡಿಯಲ್ಲಿ ಬರುವ ಒಂದು ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಮತ್ತು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಉಪ ಪ್ರಾಂಶುಪಾಲರನ್ನು ಮುಖ್ಯ ಶಿಕ್ಷಕ/ಉಪ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳೆಂದು ಪದನಾಮೀಕರಿಸಿ, ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಇವರಿಗೆ ಹೆಚ್ಚುವರಿ ಅಧಿಕಾರ ಮತ್ತು ಕರ್ತವ್ಯಗಳನ್ನು ವಹಿಸಲಾಗಿದೆ.

ಮೇಲ್ಕಂಡ ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿ ಹುದ್ದೆಗೆ ಸಾಕಷ್ಟು ಕಾರ್ಯಭಾರವನ್ನು ವಹಿಸಿ, ಪ್ರಾಥಮಿಕ ಶಾಲೆಗಳ ಆಡಳಿದಲ್ಲಿ ವಿಕೇಂದ್ರೀಕರಣ ಮತ್ತು ಗುಣಾತ್ಮಕ ಶಿಕ್ಷಣವನ್ನು ಹೆಚ್ಚಿಸಿ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಹೆಚ್ಚು ಒತ್ತು ಕೊಡುವ ದೃಷ್ಟಿಯಲ್ಲಿ, ಆಡಳಿತ ವಿಕೇಂದ್ರೀಕರಣವನ್ನು ಮಾಡಲಾಗಿತ್ತು. ಸುಮಾರು 02 ವರ್ಷಗಳ ಅವಧಿಯಲ್ಲಿ ಯಾವ ಉದ್ದೇಶಕ್ಕಾಗಿ ಈ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿತ್ತೋ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಾಗದೇ ಇರುವುದನ್ನು ಗಮನಿಸಲಾಗಿದೆ. ಸಮೂಹ ಹಂತದ ಸಹಾಯಕ ಶಿಕ್ಷಣಾಧಿಕಾರಿಗಳ ಪ್ರತ್ಯೇಕ ಹುದ್ದೆಯನ್ನು ಸೃಜಿಸದೇ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪ ಪ್ರಾಂಶುಪಾಲರುಗಳಿಗೆ ತಮ್ಮ ಕಾರ್ಯದೊಂದಿಗೆ ಹೆಚ್ಚುವರಿ ಜವಾಬ್ದಾರಿ ವಹಿಸಿರುವುದು, ಈ ರೀತಿ ಅಪೇಕ್ಷಿತ ಗುರಿ ಸಾಧಿಸಲು ಸಾಧ್ಯವಾಗದಿರುವುದಕ್ಕೆ ಪ್ರಮುಖ ಕಾರಣ ಎಂಬುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಈ ರೀತಿಯ ಹೆಚ್ಚುವರಿ ಜವಾಬ್ದಾರಿಯಿಂದಾಗಿ ಮುಖ್ಯ ಶಿಕ್ಷಕರು/ಉಪ

ಪ್ರಾಂಶುಪಾಲರುಗಳಿಗೆ ಏಕಕಾಲದಲ್ಲಿ ಅವರ ಮೂಲ ಕರ್ತವ್ಯ ಹಾಗೂ ಹೆಚ್ಚುವರಿಯಾಗಿ ಸಹಾಯಕ ಶಿಕ್ಷಣಾಧಿಕಾರಿಗಳ ಕರ್ತವ್ಯಗಳನ್ನು ನಿರ್ವಹಿಸುವಲ್ಲಿನ ತೀವ್ರ ಒತ್ತಡದಿಂದಾಗಿ ನಿಗದಿತ ಗುಣಮಟ್ಟವನ್ನು ಪ್ರೌಢಶಾಲೆಗಳಲ್ಲಿ ಅಥವಾ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಉಸ್ತುವಾರಿಯಲ್ಲಿ ಸಾಧಿಸಲು ಸಾಧ್ಯವಾಗಿಲ್ಲ.

ಈಗಾಗಲೇ ಶೈಕ್ಷಣಿಕ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನಕ್ಕಾಗಿ ಬಿ.ಆರ್.ಸಿ., ಬಿ.ಆರ್.ಪಿ., ಸಿ.ಆರ್.ಪಿ., ಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಶಿಕ್ಷಣ ಸಂಯೋಜಕರು ಇದ್ದಾರೆ. ಪ್ರತೀ ತಾಲ್ಲೂಕಿನಲ್ಲಿ ಇವರ ಸಂಖ್ಯೆ ಸರಿಸುಮಾರು 15-25 ರವರೆಗೂ ಇರುತ್ತದೆ. ಆದ್ದರಿಂದ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ/ಉಪ ಪ್ರಾಂಶುಪಾಲರುಗಳಿಗೆ ಈ ಹಿಂದೆ ವಹಿಸಲಾದ ಹೆಚ್ಚುವರಿ ಕಾರ್ಯಭಾರದಿಂದ ಮುಕ್ತಗೊಳಿಸಿದಲ್ಲಿ ಆಡಳಿತದಲ್ಲಿ ಯಾವುದೇ ಹಿನ್ನಡೆ ಉಂಟಾಗಲಾರದು. ಬದಲಿಗೆ ಪ್ರೌಢಶಾಲಾ ಉಸ್ತುವಾರಿ ಮೇಲ್ವಿಚಾರಣೆ ಹೆಚ್ಚು ಬಲಗೊಳ್ಳಲು ಸಹಾಯುವಾಗುವುದು. ಇದನ್ನು ಗಮನಿಸಿ ಪ್ರೌಢಶಾಲೆಗಳಲ್ಲಿನ ಆಡಳಿತ ಮತ್ತು ಶೈಕ್ಷಣಿಕ ಮೇಲ್ವಿಚಾರಣೆಗಾಗಿ ಇನ್ನು ಮುಂದೆ ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಬಳಸಿಕೊಂಡು ಪ್ರೌಢಶಾಲೆಗಳ ಶೈಕ್ಷಣಿಕ ಗುಣಮಟ್ಟದಲ್ಲಿ ಕುಸಿತ ಉಂಟಾಗುವುದನ್ನು ತಡೆಯಲು ಉದ್ದೇಶಿಸಲಾಗಿದೆ.

ಈಗ ಹೊಸ . ಗಣಕೀಕೃತ ತಂತ್ರಜ್ಞಾನ ಮತ್ತು ಹೆಚ್.ಆರ್.ಎಂ.ಎಸ್. . ಮೂಲಕ ವೇತನಗಳ ಬಟವಾಡೆ ಆಗುತ್ತಿರುವುದರಿಂದ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ವೇತನ ಬಿಲ್ಲುಗಳಿಗೆ ಸಹಿ ಮಾಡುವ ಅಧಿಕಾರವನ್ನು ಅಲ್ಲಿನ ಪತ್ರಾಂಕಿತ ವ್ಯವಸ್ಥಾಪಕರಿಗೆ ಪ್ರತ್ಯಾಯೋಜಿಸಲಾಗಿರುವುದರಿಂದ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹೆಚ್ಚಿನ ಒತ್ತಡ ಉಂಟಾಗಲಾರದು.

ಮೇಲಿನ ಎಲ್ಲಾ ವಾಸ್ತವಿಕ ಅಂಶಗಳನ್ನು ಅವಲೋಕಿಸಿ, ಪ್ರೌಢಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಪ್ರಾಥಮಿಕ ಶಾಲೆಗಳಲ್ಲಿನ ಮೇಲ್ವಿಚಾರಣೆ, ಮಾರ್ಗದರ್ಶನವನ್ನು ಹಿಂದಿನಂತೆ ~~ಕ್ಷೇತ್ರ~~ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರತ್ಯಾಯೋಜಿಸುವುದು ಸೂಕ್ತವೆಂದು ಭಾವಿಸಿ, ಈ ಹಿಂದಿನ ದಿನಾಂಕ :01-08-2007ರ ಸರ್ಕಾರದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 201 ಎಸ್‌ಒಹೆಚ್ 2009,**

**ಬೆಂಗಳೂರು, ದಿನಾಂಕ 09ನೇ ನವಂಬರ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 109 ಡಿಪಿಎ 2007, ದಿನಾಂಕ :01-08-2007ರ ಆದೇಶದಲ್ಲಿ ಸಮೂಹ

ಸಹಾಯಕ ಶಿಕ್ಷಣಾಧಿಕಾರಿಗಳು [ಸಿ.ಎ.ಇ.ಓ.] ಎಂದು ಪದನಾಮೀಕರಿಸಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಇವರುಗಳಿಗೆ ಹೆಚ್ಚುವರಿಯಾಗಿ ವಹಿಸಿದ್ದ ಕಾರ್ಯಭಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ. ದಿನಾಂಕ :01-08-2007ರ ಹಿಂದೆ ಇದ್ದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರವನ್ನು ಪ್ರತ್ಯಾಯೋಜಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಹೆಚ್.ಟಿ.ಜಯರಾಂ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.[ಪ್ರೌಢ ಶಿಕ್ಷಣ]

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ – ಇದನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಇದರ 2000 ಪ್ರತಿಗಳನ್ನು ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಪ್ರೌಢ-2, ಕೊಠಡಿ ಸಂಖ್ಯೆ. 655, 6ನೇ ಮಹಡಿ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

---

**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಎಡಿಎಂ.2.ಪ್ರಾ.ಹಂ.ಕ್ಲ-137/2009-10 ದಿ:11-11-2009

**ಜ್ಞಾಪನ**

ಸರ್ಕಾರದ ಆದೇಶ ಸಂಖ್ಯೆ: ಇಡಿ 201 ಎಸ್‌ಒಹೆಚ್ 2009, ದಿನಾಂಕ:09-11-2009ರ ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

11/XI

(ಡಿ.ಎಸ್.ರಾಜಣ್ಣ)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಪ್ರತಿಯನ್ನು:-

1. ಮಹಾಲೇಖಪಾಲರು (ಎ&ಇ) ಕರ್ನಾಟಕ ಬೆಂಗಳೂರು
2. ರಾಜ್ಯ ಯೋಜನಾ ನಿರ್ದೇಶಕರು,ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ

ಇವರಿಗೆ:-

4. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
5. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳಿಗೆ
6. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ
7. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
8. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಮೂಹ ಸಹಾಯಕ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)
9. ಕಛೇರಿ ಪ್ರತಿ